ಶತ್ರುಗಳು ಎಂದು ಗುರುತಿಸುವ ಪ್ರಕ್ರಿಯೆಯಿರುವುದು ಕಾಣಿಸುತ್ತದೆ. ನಂತರ ಕಾಂಗ್ರೆಸ್ ಸರ್ಕಾರದ ಸಮಯಕ್ಕೆ ಮತ್ತೆ ಈ ಗುರುತನ್ನು ಏರ್ಪಡಿಸುವ ಯೋಜನೆ ತಲೆಯೆತ್ತುತ್ತದೆ. ಈ ಬಾರಿ ಅದು ಬರುವುದು ನಂದನ್ ನಿಲೇಕಣಿಯ ವತಿಯಿಂದ.

ನಿಲೇಕಣಿಗೆ ಗುರುತು ಮತ್ತು ಮಾಹಿತಿ ದಕ್ಷತೆಗೆ ಪ್ರತೀಕವಾಗಿದೆ. ಗುರುತನ್ನು ಸರಿಯಾಗಿ ಮಾಡಿದರೆ ಭ್ರಷ್ಟಾಚಾರವನ್ನು ನಿಯಂತ್ರಿಸಬಹುದು. ಗುರುತು ಮಾಹಿತಿಯೂ ಸಹ. ಮಾಹಿತಿಯೇ ವ್ಯಾಪಾರದ ಆಧಾರವಾಗಬಹುದು. 'ಇಂಡಿಯಾ ವಿಲ್ ಬಿ ಡೇಟಾ ರಿಚ್ ಬಿಫೋರ್ ಇಟ್ ವಿಲ್ ಬಿ ಆಯಿಲ್ ರಿಚ್' ಎನ್ನುವ ಅವರ ಮಾತುಗಳೇ ಅದರ ಮೂಲಸಾರ. 'ಆಧಾರ್' ಅಧಿಕೃತ, ವಿಶಿಷ್ಟ ಗುರುತನ್ನು ನೀಡುವ ಬೃಹತ್ ಮಾಹಿತಿ ಸಂಗ್ರಹಣಾ ಯೋಜನೆಯಾಗುತ್ತದೆ. 'ಆಧಾರ್'ಗೆ ಕಾನೂನಿನ ಚೌಕಟ್ಟಿರುವುದಿಲ್ಲ. ಆದರೆ ಅತಿ ಕಡಿಮೆ ಮಾಹಿತಿಯನ್ನು ಸಂಗ್ರಹಿಸುವ ಮತ್ತು ನಿಮ್ಮ ಗುರುತು ನಿಮ್ಮದೋ ಅಲ್ಲವೋ ಅನ್ನುವ ಅತ್ಯಂತ ಕನಿಷ್ಠ ಸೇವೆಯನ್ನೊದಗಿಸುವ ಕಾರ್ಯಕ್ರಮವೆಂದು ಘೋಷಿಸಿದರೂ, ಈ ಗುರುತು ಎಲ್ಲೆಡೆ ವ್ಯಾಪಕವಾಗಿ ಬಳಸುವ ಪರಿಸ್ಥಿತಿಯನ್ನು ಏರ್ಪಡಿಸುವ ಕಾರ್ಯಕ್ರಮವನ್ನು ಅವರು ಸಶಕ್ತವಾಗಿ ಕೈಗೊಳ್ಳುತ್ತಾರೆ. ಅದನ್ನು ಕಾನೂನಿನ ರೀತ್ಯಾ ಅಥವಾ ಬೇರಾವುದೇ ರೀತಿಯಲ್ಲಿ ಪ್ರಶ್ನಿಸುವಷ್ಟರಲ್ಲಿ ಅದರ ವ್ಯಾಪಕತೆ ಎಷ್ಟಾಗುತ್ತದೆಂದರೆ, ಅದನ್ನು ರದ್ದು ಮಾಡಲು ಸರ್ವೋನ್ನತ ನ್ಯಾಯಾಲಯವೂ ಹಿಂದೆಗೆಯುತ್ತದೆ.

'ಆಧಾರ್' ಗುರುತಿನ ಚೀಟಿಯ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಆಗಿರಬಹುದಾದ ಲಾಭವನ್ನು ಲೆಕ್ಕಕಟ್ಟಿ ಮಾಹಿತಿಯನ್ನು ನೀಡುತ್ತಿರುವ ಸಮಯದಲ್ಲಿ, ರೀತಿಕಾ ಖೇರಾ ಮತ್ತು ಜೀನ್ ಡ್ರೀಸ್ ಜಾರ್ಖಂಡಿನಲ್ಲಿ ಕೈಗೊಂಡ ಅಧ್ಯಯನದಲ್ಲಿ ಈ ಕಾರ್ಯಕ್ರಮದಿಂದಾಗಿ ನಿಜಕ್ಕೂ ದಕ್ಕಬೇಕಿದ್ದ ಸವಲತ್ತುಗಳು– ಪಡಿತರ ವ್ಯವಸ್ಥೆಯಿಂದ ಸಿಗಬೇಕಿದ್ದ ಆಹಾರ ಧಾನ್ಯ, ಪಿಂಚಣಿ ಇತ್ಯಾದಿಗಳು– ಸಿಗದಿರುವುದನ್ನು, ಅದರಿಂದಾಗಿ ಜನರ ಹಸಿವು, ಹಸಿವಿನಿಂದಾಗುವ ಸಾವುಗಳನ್ನು ಉಲ್ಲೇಖಿಸುತ್ತಾರೆ. ಆಧಾರ್ ಯೋಜನೆಯಿಂದ ಉಳಿತಾಯವಾದ ಧನವು ಮಾಹಿತಿಯಾದರೆ, ಈ ವ್ಯವಸ್ಥೆಯಿಂದ ತಾಂತ್ರಿಕ ಕಾರಣಗಳಿಗಾಗಿ ಹೊರದೂಡಲಾದವರ ಗಾಥೆಗಳು ಸಾಹಿತ್ಯದ ದುರಂತ ಕಥೆಗಳಾಗಿ ನಮ್ಮ ಮುಂದೆ ನಿಲ್ಲುತ್ತವೆ.

ಭಾಟಿಯಾ ಈ ಎಲ್ಲವನ್ನೂ ಒಂದು ಕೇಂದ್ರದತ್ತ ತಂದು ನಿಲ್ಲಿಸುತ್ತಾರೆ. ಒಬ್ಬರ ಗುರುತು ಮಾಹಿತಿಯಾಗಿ, ಅದರ ಬಳಕೆ ವ್ಯಾಪಕವಾದರೆ, ಗುರುತಿನ ಜೊತೆಗೆ ನಮ್ಮ ವಹಿವಾಟು, ತೆರಿಗೆ, ಎಲ್ಲವೂ ದಾಖಲಾದಾಗ ನಮ್ಮ ವ್ಯಕ್ತಿತ್ವವೇ ಮಾಹಿತಿಯಾಗುತ್ತದೆ. ಎಲ್ಲವೂ ಒಂದೇ ಕೇಂದ್ರೀಕೃತ ಮೂಲಕ್ಕೆ ಹೋದಾಗ – ಮಾಹಿತಿ ಹೊಂದಿದವರು ಅತ್ಯಂತ ಶಕ್ತಿಶಾಲಿಗಳಾಗುತ್ತಾರೆ. ಅದರಿಂದ ವಿಸ್ತೃತ ವ್ಯಾಪಾರ ಮಾಡುವ ಸಾಧ್ಯತೆಗಳಿರಬಹುದು. ಅದೇ ಮಾಹಿತಿ ರಾಜಕೀಯ ಮೂಲಗಳಿಗೆ ಹೋದಾಗ ಏನಾಗಬಹುದು ಎಂಬುದನ್ನು ನೆನೆಸಿಕೊಂಡರೆ ಮೈ ಜುಂ ಎನ್ನುತ್ತದೆ.

ಭಾಟಿಯಾ ಯಾವುದನ್ನೂ ವ್ಯಕ್ತವಾಗಿ ಹೇಳದೇ ಎಲ್ಲವನ್ನೂ ಒಂದು ಸರಣಿಯಲ್ಲಿ ತಂದು ನಿಲ್ಲಿಸುತ್ತಾರೆ. ಭಿನ್ನ ಬಿಂದುಗಳನ್ನು ಒಂದು ರೇಖೆಯಾಗಿ ಕಾಣುವ ಕೆಲಸ ಓದುಗನದ್ದು. ಈ ಬಿಂದುಗಳನ್ನು ಪೋಣಿಸುವ ದಾರ ಈ ಪುಸ್ತಕದ ಶೀರ್ಷಿಕೆಯಲ್ಲಿದೆ: 'ದ ಐಡೆಂಟಿಟಿ ಪ್ರಾಜೆಕ್ಟ್ – ದ ಅನ್‌ಮೇಕಿಂಗ್ ಆಫ್ ಎ ಡೆಮಾಕ್ರಸಿ'. ಇದರಿಂದ ನಮ್ಮ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗುತ್ತಿದೆ.

ಮುಗಿಸುವ ಮುನ್ನ, ಮತ್ತೆ ಗುಜರಾತಿನ ಕೋಮುಗಲಭೆಗೆ ಬರೋಣ. ಮೊದಲಿಗೆ ಉಲ್ಲೇಖಿಸಿದ ಪಂಜರಾಪೋಲ್ ಚಾರ್ ರಾಸ್ತಾದ ಹತ್ತಿರದಲ್ಲೇ 'ಎಡ್ವರ್ಡ್ ಡ್ರೈ ಕ್ಲೀನರ್ಸ್' ಎನ್ನುವ ಅಂಗಡಿಯಿತ್ತು. ಅದೂ ಒಂದು ಕೋಮಿಗೆ ಸೇರಿದ ವ್ಯಕ್ತಿಯ ಸ್ವಾಮಿತ್ವದ್ದು. ಹೆಸರಿನಲ್ಲಿ ಒಂದು ಕೋಮಿನ ಲಕ್ಷಣವಿಲ್ಲದಿದ್ದರೂ, ಎಲ್ಲವನ್ನೂ ಧ್ವಂಸ ಮಾಡುತ್ತಿದ್ದ ಗುಂಪಿನ ಬಳಿ ಸ್ವಾಮಿತ್ವದ ಮಾಹಿತಿಯಿತ್ತು. ಆದರೆ ವಿಧ್ವಂಸ ಮಾಡಲೆಂದು ಅಲ್ಲಿಗೆ ಬಂದಾಗ ಮಾಲೀಕ ಹೇಳಿದನಂತೆ: "ನನ್ನ ಈ ಅಂಗಡಿಯನ್ನು ಧ್ವಂಸ ಮಾಡಿ. ಆದರೆ ಈ ಅಂಗಡಿಯಲ್ಲಿರುವ ಅಷ್ಟೂ ಬಟ್ಟೆ ನಿಮ್ಮ ಕೋಮಿಗೆ ಸೇರಿದವರದ್ದು". ಮಾಹಿತಿಯ ಮಿತಿಯನ್ನೂ, ಮಾನವ ಸಂಬಂಧಗಳ ಸಂಕೀರ್ಣತೆ, ವ್ಯಾಪಾರದ ಪದರಗಳನ್ನೂ ಈ ಮಾತು ಹೇಳುತ್ತದೆ. ಈ ಘಟನೆ ನಿಜವಲ್ಲದಿದ್ದರೂ, ಆಲೋಚನೆಗೆ ಸಾಕಷ್ಟು ಗ್ರಾಸವನ್ನು ಒದಗಿಸಿಕೊಡುತ್ತದೆ.

●